ಇ) ಸಾರ್ವಜನಿಕರು ಹಾಗೂ ವಿಚಾರಣಾಧೀನ ಖೈದಿಗಳನ್ನು ಕರೆತರುವ ಎಲ್ಲಾ ಪೊಲೀಸ್ ಸಿಬ್ಬಂದಿಗಳಿಗೆ ಸಾಕಷ್ಟು ಸ್ಥಳಾವಕಾಶವನ್ನು (ನಿರೀಕ್ಷಣಾ ಕೊಠಡಿ) ಒದಗಿಸಲಾಗಿದೆ. ಈ ವ್ಯವಸ್ಥೆಯು ಹೆಚ್ಚುವರಿಯಾಗಿ ನಿರ್ಮಾಣಗೊಳ್ಳುತ್ತಿರುವ ನ್ಯಾಯಾಲಯಗಳ ಕಟ್ಟಡಗಳಲ್ಲಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಈ) ಈ ಮೇಲಿನ ಎಲ್ಲಾ ವ್ಯವಸ್ಥೆಗಳೊಂದಿಗೆ ರಾಜ್ಯದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ನ್ಯಾಯಾಲಯಗಳ ಕಟ್ಟಡಗಳಲ್ಲಿ ಪ್ರತ್ಯೇಕವಾದ ಮಹಿಳಾ ಮತ್ತು ಮಕ್ಕಳ ಕೊಠಡಿ ಅದಕ್ಕೆ ಹೊಂದಿಕೊಂಡಂತೆ ಶೌಚಾಲಯ, ವಿಚಾರಣಾಧೀನ ಖೈದಿಗಳ ಕೊಠಡಿ ಅದಕ್ಕೆ ಹೊಂದಿಕೊಂಡಂತೆ ಶೌಚಾಲಯ ಮತ್ತು ಸಾರ್ವಜನಿಕರು ಕುಳಿತುಕೊಳ್ಳಲು ಸಮರ್ಪಕವಾದ ನಿರೀಕ್ಷಣಾ ಕೊಠಡಿಗಳನ್ನು ಮತ್ತು ಶೌಚಾಲಯದ ವ್ಯವಸ್ಥೆಯನ್ನು ಕೂಡ ಕಲ್ಪಿಸಿಕೊಡಲಾಗಿದೆ.

ಉ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಹೊಸ ಜಿಲ್ಲೆ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಯೋಜನೆಗಳು

28 (01); ಡಾ॥ ಮಾಲಕರೆಡ್ಡಿ .ಎ.ಬಿ. (ಯಾದಗಿರಿ)

ಅ) ಯಾದಗಿರಿ ಜಿಲ್ಲೆ ರಚನೆಯಾಗಿ ಐದು ವರ್ಷ ಕಳೆದರೂ ಸಹ ಯಾವುದೇ ಅಭಿವೃದ್ಧಿಯಾಗದೇ ತೀರಾ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜಿಲ್ಲೆಯಲ್ಲಿ ಸರ್ಕಾರಿ ಕಛೇರಿಗಳ ಸ್ಥಾಪನೆಯೂ ಸೇರಿದಂತೆ ಜಿಲ್ಲೆಯ ಸರ್ವಾಂಗೀಣ ಪ್ರಗತಿಗೆ ಕನಿಷ್ಠ ₹. 1000 ಕೋಟಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ಜಿಲ್ಲೆಯ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಮುಂದಾಗುವುದೇ?

ಇ) ಹೊಸ ಜಿಲ್ಲೆಯಾದ ಯಾದಗಿರಿಯ ಅಭಿವೃದ್ಧಿ ದೃಷ್ಟಿಯಲ್ಲಿ ವಿಶೇಷವಾಗಿ ಕಾಳಜಿ ವಹಿಸದೇ ನಿರ್ಲಕ್ಷ್ಯ ತಾಳಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ, ಈ ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರ ಯಾವ್ಯಾವ ಕ್ರಮಗಳನ್ನು ಕೈಗೊಳ್ಳಲಿವೆ?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಹೌದು

ಆ) ಯಾದಗಿರಿ ಜಿಲ್ಲೆಯ ಅಭಿವೃದ್ಧಿಗಾಗಿ ಸಾಮಾನ್ಯ ಕಾರ್ಯಕ್ರಮಗಳಲ್ಲದೆ ಈ ಕೆಳಕಾಣಿಸಿದಂತೆ ವಿಶೇಷ ಅನುದಾನವನ್ನು ಒದಗಿಸಿದೆ:

ಅ) ಅಭಿವೃದ್ಧಿ ಕಾಮಗಾರಿಗಳಿಗೆ ₹. 50 ಕೋಟಿ ವಿಶೇಷ ಅಭಿವೃದ್ಧಿ ಅನುದಾನ ಘೋಷಿಸಲಾಗಿದ್ದು, ಅದರಲ್ಲಿ ₹. 43.66 ಕೋಟಿ ಬಿಡುಗಡೆಯಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಆ) ಜಿಲ್ಲಾ ಪಂಚಾಯತ್ ಅಧಿಕಾರಿಗಳ ವಸತಿ ಗೃಹ ನಿರ್ಮಾಣದ ಸಲುವಾಗಿ 2014–15ನೇ ಸಾಲಿಗೆ ಯಾದಗಿರಿ ಜಿಲ್ಲೆಗೆ ₹. 4.75 ಕೋಟಿ ಅನುದಾನವನ್ನು ಒದಗಿಸಲಾಗಿದೆ.

ಇ) ಯಾದಗಿರಿ ಜಿಲ್ಲಾ ಹಾಗೂ ಜಿಲ್ಲಾ ಪಂಚಾಯತ್‌ನ ಕಚೇರಿಗಳ ಸಂಕೀರ್ಣ ಕಟ್ಟಡ ಕಾಮಗಾರಿಗಳನ್ನು ₹. 45 ಕೋಟಿ ಮೊತ್ತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ವಿಶೇಷ ಪ್ಯಾಕೇಜ್ ಅಡಿಯಲ್ಲಿ ಐದು ಇಲಾಖೆಗಳಿಗೆ ₹. 394 ಕೋಟಿಗಳನ್ನು ಒದಗಿಸಲಾಗಿದ್ದು, 199.48 ಕೋಟಿ ರೂ.ಗಳು ಬಿಡುಗಡೆಯಾಗಿರುತ್ತದೆ.

ಉ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯನ್ನು ನಿವಾರಿಸಲು ಸಂವಿಧಾನದ ಅನುಚ್ಛೇದ 371(ಜೆ)ರಡಿ ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ಕಲ್ಪಿಸಲಾಗಿದ್ದು, ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಗೆ 2013–14 ಮತ್ತು 2014–15 ಸಾಲಿಗೆ ಒದಗಿಸಿದ ಅನುದಾನದ ವಿವರಗಳು ಕೆಳಕಾಣಿಸಿದಂತಾಗಿದೆ.

(₹. ಕೋಟಿಗಳಲ್ಲಿ)

ವರ್ಷ	ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ	ಇದುವರೆವಿಗೆ ಬಿಡುಗಡೆಯಾದ ಅನುದಾನ
2013–14	153.50	30.00
2014–15	600.00	300.00

ಇದಲ್ಲದೆ 2013–14ನೇ ಸಾಲಿನ ಕ್ರಿಯಾ ಯೋಜನೆಯನ್ವಯ ಬಾಕಿ ಉಳಿದ ₹. 120.00 ಕೋಟಿಗಳನ್ನು ಒಳಗೊಂಡಂತೆ ₹. 400.00 ಕೋಟಿಗಳನ್ನು ಹೆಚ್ಚುವರಿಯಾಗಿ ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಗೆ ಒದಗಿಸಿದೆ.

ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಯಾದಗಿರಿ ಜಿಲ್ಲೆಯ ಅಭಿವೃದ್ಧಿಗಾಗಿ ಮಂಡಲಿಯಿಂದ ಮಂಜೂರಾದ ಅನುದಾನದ ವಿವರಗಳು ಕೆಳಕಂಡಂತಿವೆ.

(₹. ಲಕ್ಷಗಳಲ್ಲಿ)

ವರ್ಷ/ವಲಯ	ಮಂಜೂರಾದ ಅನುದಾನ
2013–14 ಮೂಲಭೂತ ಸೌಕರ್ಯಗಳ ಅಂತರಗಳಿಗೆ	1179.09
ಸಾಂಸ್ಥಿಕ ಅಂತರಗಳಿಗೆ	446.02
2014–15 ಮೂಲಭೂತ ಸೌಕರ್ಯಗಳ ಅಂತರಗಳಿಗೆ	5826.88
ಸಾಂಸ್ಥಿಕ ಅಂತರಗಳಿಗೆ	2417.81

ಯಾದಗಿರಿ ಜಿಲ್ಲೆಯ ಅಭಿವೃದ್ಧಿಗಾಗಿ ಮೇಲ್ಕಾಣಿಸಿದಂತೆ ಈಗಾಗಲೇ ಕ್ರಮವಹಿಸಲಾಗಿದೆ.

ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳ ಹಿಂದುಳಿದಿರುವಿಕೆಯನ್ನು ಗಮನದಲ್ಲಿರಿಸಿ ಮೇಲ್ಕಾಣಿಸಿದಂತೆ ಹಲವಾರು ಕ್ರಮಗಳನ್ನು ವಹಿಸಿರುವುದರಿಂದ ಯಾದಗಿರಿ ಜಿಲ್ಲೆಯ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಗ್ರಾನೈಟ್ ಕಲ್ಲು ಗಣಿ ಗುತ್ತಿಗೆ

31 (168); ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ರಾಜ್ಯದಲ್ಲಿ ಗ್ರಾನೈಟ್ ಕಲ್ಲು ಗಣಿಗಾರಿಕೆಗಾಗಿ ಸರ್ಕಾರ ನೀಡಿರುವ ಗುತ್ತಿಗೆ ಪರವಾನಗಿಗಳು ಎಷ್ಟು; ಯಾವ ಯಾವ ಕಂಪನಿ, ವ್ಯಕ್ತಿಗಳಿಗೆ ಎಷ್ಟು ಅವದಿಯವರೆಗೆ ಗ್ರಾನೈಟ್ ಕಲ್ಲು ಗಣಿಗಾರಿಕೆ ಗುತ್ತಿಗೆ ನೀಡಲಾಗಿದೆ.

ಆ) 2013–14 ರಿಂದ 2014–15 ರ ಡಿಸೆಂಬರ್ ಅಂತ್ಯಕ್ಕೆ ಗ್ರಾನೈಟ್ ಕಲ್ಲು ಗಣಿಗಾರಿಕೆ ಪರವಾನಗಿಗಳಿಂದ ಸರ್ಕಾರಕ್ಕೆ ಸಂದಾಯವಾಗಿರುವ ರಾಜಧನದ ಮೊತ್ತವೆಷ್ಟು? (ಕಂಪನಿವಾರು, ವ್ಯಕ್ತಿವಾರು ಸರ್ಕಾರಕ್ಕೆ ಸಲ್ಲಿಕೆಯಾದ ರಾಜಧನದ ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ ಪ್ರಸ್ತುತ 461 ಅಲಂಕಾರಿಕ ಶಿಲಾ ಕಲ್ಲುಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುತ್ತವೆ.
ಕಲ್ಲುಗಣಿ ಗುತ್ತಿಗೆ ಸಂಖ್ಯೆ, ಕಂಪನಿಯ ಹೆಸರು, ಜಿಲ್ಲೆಯ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) 2013–14 ಮತ್ತು 2014–15ನೇ ಸಾಲಿನ ಜನವರಿ ಮಾಹೆಯವರೆಗೆ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆದಾರರಿಂದ ಕ್ರಮವಾಗಿ ₹. 79.19 ಕೋಟಿ ಹಾಗೂ 75.67 ಕೋಟಿ ರಾಜಧನ ಸಂಗ್ರಹಣೆಯಾಗಿದೆ. ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.